ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1130(1533)
ಸದಸ್ಯರ ಹೆಸರು : ಶ್ರೀ ಮೋಹನ್ ಪಿ ಸಿ (ಚಿಕ್ಕಪೇಟೆ)
ಉತ್ತರಿಸುವ ಸಚಿವರು : ಶ್ರೀ ಹೆಚ್ ಎಸ್ ಮದೇವಪ್ರಸಾದ್ (ಕನ್ನಡ ಮತ್ತು ಸಂಸ್ಕೃತ ಸಚಿವರು)

ಅ) ರಾಷ್ಟ್ರೀಯ ಕಲಾಶಾಲೆಯನ್ನು ಸ್ಥಾಪಿಸಲು ಬೆಂಗಳೂರಿನಲ್ಲಿ ಜಾಗ ನೀಡಲಾಗಿದೆಯೇ,

ಹೌದು

ಆ) ಹಾಗಿದ್ದಲ್ಲಿ, ಎಲ್ಲಿ ಮತ್ತು ಎಷ್ಟು ಜಾಗವನ್ನು ಗುರುತಿಸಲಾಗಿದೆ (ವಿವರ ನೀಡುವುದು),

ಬೆಂಗಳೂರು ನಗರದ ಅರಮನೆ ರಸ್ತೆಯಲ್ಲಿರುವ ಕರ್ನಾಟಕ ಗೃಹಮಂಡಲಿ ಅಧೀನದಲ್ಲಿರುವ ಮಾಣಿಕ್ಯ ವೇಲು ಮ್ಯಾನ್‌ಷನ್‌ನಲ್ಲಿ ರಾಷ್ಟ್ರೀಯ ಕಲಾಗ್ಯಾಲರಿಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ಇದರ ಒಟ್ಟು ವಿಸ್ತೀರ್ಣ 3 ಎಕರೆ, 18 ಗುಂಟೆ,

ಇ) ಅಗತ್ಯವಾದ ಸೌಲಭ್ಯ ಹಾಗೂ ವಾತಾವರಣ ಬೆಂಗಳೂರಿನ ಹೊರಗೆ ಲಭಿಸಿದರೆ ಅಲ್ಲಿ ಸ್ಥಾಪಿಸಲು ಸರ್ಕಾರ ಚಿಂತನೆ ನಡೆಸಿದೆಯೆ,

ಈಗಾಗಲೇ ಕರ್ನಾಟಕ ಗೃಹಮಂಡಲಿ ವಶದಲ್ಲಿರುವ ಮಾಣಿಕ್ಯ ವೇಲು ಮೆನ್‌ಷನ್ ಕಟ್ಟಡವನ್ನು 30ವರ್ಷಗಳ ಗುತ್ತಿಗೆ ಆಧಾರದ ಮೇಲೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಶಕ್ಕೆ ಪಡೆಯಲಾಗಿದ್ದು, ಇದನ್ನು ಭಾರತ ಸರ್ಕಾರದ ಸಂಸ್ಕೃತಿ ಮಂತ್ರಾಲಯಕ್ಕೆ ಉಪ ಗುತ್ತಿಗೆ ಆಧಾರದ ಮೇಲೆ ನೀಡಲಾಗಿರುತ್ತದೆ ಭಾರತ ಸರ್ಕಾರದವರು ಮಾಣಿಕ್ಯ ವೇಲು ಮೆನ್‌ಷನ್‌ನಲ್ಲಿ ರಾಷ್ಟ್ರೀಯ ಕಲಾಶಾಲೆಯನ್ನು ರೂಪಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಈ ಶಾಲೆಯನ್ನು ಬೆಂಗಳೂರಿನ ಹೊರಗೆ ಸ್ಥಾಪಿಸುವ ಉದ್ದೇಶವಿರುವುದಿಲ್ಲ

ಈ) ರಾಷ್ಟ್ರೀಯ ಕಲಾಶಾಲೆಯನ್ನು ಸ್ಥಾಪಿಸಲು ಸರ್ಕಾರ ಇದುವರೆಗೂ ತೆಗೆದುಕೊಂಡಿರುವ ಕ್ರಮಗಳೇನು?

ರಾಜ್ಯದ ಕಲಾವಿದರು ಬಹುದಿನಗಳ ಬೇಡಿಕೆಯಾದ ರಾಷ್ಟ್ರೀಯ ಕಲಾಶಾಲೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ವಾರ್ಷಿಕ ರೂ 30,91,812/– ರ ಬಾಡಿಗೆ ಆಧಾರದ ಮೇಲೆ ಪಡೆದುಕೊಂಡು ರಾಷ್ಟ್ರೀಯ ಕಲಾಗ್ಯಾಲರಿಗೆ ಸಾಂಕೇತಿಕ ವಾಗಿ ವಾರ್ಷಿಕ ರೂ 100 (ಒಂದು ರೂಪಾಯಿ ಮಾತ್ರ) ಬಾಡಿಗೆ ಆಧಾರದ ಮೇಲೆ ರಾಷ್ಟ್ರೀಯ ಕಲಾಶಾಲೆ ಉದ್ದೇಶಕ್ಕಾಗಿ ಭಾರತ ಸರ್ಕಾರ ಇವರಿಗೆ ಬಿಟ್ಟು ಕೊಡಲಾಗಿದೆ